ಹೋಗುತ್ತಿರಬೇಕಾದರೆ ಧಿಕ್ಕಾರ ಹೇಳಿಕೊಂಡು ಹೋಗಿರುವಂಥಾದ್ದು ಇದೆ. ಆದರೆ ಸದನದ ಒಳಗೆ ಬಂದು ಬಾವಿಯೊಳಗೆ ಕುಳಿತಂತಹ ಸಂದರ್ಭದಲ್ಲಿ ಈ ರೀತಿಯ ಧಿಕ್ಕಾರ ಕೂಗುವುದು ಬಹುಶಃ ಸದನದ ಗೌರವದ ಪ್ರಶ್ನೆ ಕೂಡ ಆಗುತ್ತದೆ. ನಾವು ಮಾಡಿದ್ದೇವೆ ಇಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ಹೌದು ವಿರೋಧ ಪಕ್ಷದಲ್ಲಿ ಇದ್ದೆವು ಮಾಡಿದ್ದೆವು , ನೀವು ಆ ಕಾಲದಲ್ಲಿ ಇದ್ದೀರಿ. ನಾನು ನಿಮ್ಮ ಜೊತೆಗೆ ಚರ್ಚೆಗೆ ಬರುವುದಿಲ್ಲ. ಈಗ ಇದೇ ಅವರ ಒಂದು ನೀತಿ, ಇದನ್ನೆ ಅವರು ಮುಂದುವರೆಸಿಕೊಂಡು ಹೋಗುತ್ತೇವೆಂದರೆ ನಾವು ಹೇಳುತ್ತಿದ್ದೇವೆ. ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಮುಂದಿನ ಕಾರ್ಯಕಲಾಪಗಳಿಗೆ ಅನುವು ಮಾಡಿಕೊಡಬೇಕೆಂದು ಹೇಳತ್ತಿದ್ದೇನೆ. ಆದರೆ ಅವರು ಅದು ಬೇಡವೆಂದರೆ, ಅದು ನಿಮ್ಮ ನೀತಿಯಾಗಿದ್ದರೆ,ತಾವು ಅದಕ್ಕೆ ಬದ್ಧರಾಗಿದ್ದರೆ ಅಧ್ಯಕ್ಷರೆ, ತಾವು ಮುಂದಿನ ಕ್ರಮವನ್ನು ಜರುಗಿಸಬೇಕಾಗುತ್ತದೆ. ಅವರು ಸದನದ ಒಳಗೆ ನಿಂತುಕೊಂಡು ಈ ರೀತಿ ಮಾತನಾಡುತ್ತಿರತಕ್ಕಂಥದ್ದು ಮತ್ತು ಅದನ್ನು ಪತ್ರಿಕೆ ಮುಖಾಂತರ ಹೇಳುತ್ತಿರುವಂಥದ್ದು ಮತ್ತು ನಾವು ಅದಕ್ಕೆ ಉತ್ತರ ಹೇಳುವಂತಹ ಪರಿಸ್ಥಿತಿಯಲ್ಲಿ ಇವತ್ತು ನಾವು ಇಲ್ಲ. ಏಕೆಂದರೆ ಅವರು ಬಾವಿಯಲ್ಲಿ ಕುಳಿತುಕೊಂಡು ಏನಾದರೂ ಮಾತನಾಡಿದರೆ ನಾವು ಉತ್ತರ ಹೇಳುವಂತಹ ಪರಿಸ್ಥಿತಿಯಲ್ಲಿರುವುದಿಲ್ಲ. ಬಾವಿಯಲ್ಲಿ ಕುಳಿತುಕೊಂಡಾಗ ಮಾತನಾಡುವಂತಹ ಅವಕಾಶ ಕೂಡ ಇರುವುದಿಲ್ಲವೆಂಬುದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ಆದುದರಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಮುಂದಿನ ಕಾರ್ಯಕಲಾಪಗಳನ್ನು ನಡೆಸೋಣ. ಇಲ್ಲದಿದ್ದರೆ ಅಧ್ಯಕ್ಷರೆ, ತಾವು ತಮಗೆ ಇರುವಂತಹ ಅಧಿಕಾರವನ್ನು ಚಲಾಯಿಸಬೇಕೆಂದು ನಾನು ತಮ್ಮನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:-ಈಗ ಎರಡು ಪ್ರಕಟಣೆಗಳು ಇದೆ. ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

ಪ್ರಕಟಣೆ -

ಕರ್ನಾಟಕ ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಭಂಧಿಸಿದಂತೆ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ತನಿಖೆಯನ್ನು ನಡೆಸಿ ಸದನಕ್ಕೆ ವರದಿಯನ್ನು ಸಲ್ಲಿಸಲು ರಚಿಸಲಾದ ಜಂಟಿ ಸದನದ ಸಮಿತಿಗೆ ವಿಧಾನಪರಿಷತ್ತು ತನ್ನ ಸಹಮತವನ್ನು ಸೂಚಿಸಲಾಗಿದೆ ಎಂದು ಹಾಗೂ ಈ ಕೆಳಕಂಡ ಸದಸ್ಯರು ಸಮಿತಿಯ ಸದಸ್ಯರಾಗಿರುತ್ತಾರೆಂದು ತಿಳಿಸುತ್ತೇನೆ.

ಶ್ರೀಯುತರುಗಳಾದ:

1. ಟಿ.ಎನ್.ನರಸಿಂಹಮೂರ್ತಿ
2. ಕೆ.ಮಲ್ಲಣ್ಣ
3. ಡಿ.ಹೆಚ್.ಶಂಕರಮೂರ್ತಿ
4. ಪಿ.ಆರ್.ಸುದರ್ಶನ್
5. ಡಾ:ಎಂ.ಪಿ.ನಾಡಗೌಡ
6. ಬಸವರಾಜ್ ಎನ್.ಹೊರಟ್ಟಿ

ಸದನದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಸಮಗ್ರವಾದ ತನಿಖೆ ನಡೆಸಿ ಸದನಕ್ಕೆ ವರದಿಯನ್ನು ಸಲ್ಲಿಸಲು 15 ಜನ ವಿಧಾನಸಭೆಯ ಸದಸ್ಯರನ್ನು ಹಾಗೂ 5 ಜನ

ವಿಧಾನಪರಿಷತ್ತಿನ ಸದಸ್ಯರನ್ನು ಒಳಗೊಂಡ ಜಂಟಿ ಸದನದ ಸಮಿತಿಯನ್ನು ನೇಮಕ ಮಾಡಿರುವ ಬಗ್ಗೆ ದಿ:25-8-95 ರಂದು ಈ ಸದನದಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ದಿ:31-8-95 ರಂದು ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದ ಪ್ರಕಾರ ವಿಧಾನಪರಿಷತ್ತಿನ 6 ಜನ ಸದಸ್ಯರನ್ನು ಈ ಜಂಟಿ ಸದನ ಸಮಿತಿಗೆ ನೇಮಕ ಮಾಡಲಾಗಿರುವುದರಿಂದ ಈ ಮೇಲ್ಕಂಡ ಸಮಿತಿಯಲ್ಲಿ ಒಟ್ಟು 15 ಜನ ವಿಧಾನಸಭಾ ಸದಸ್ಯರು ಹಾಗೂ 6 ಜನ ವಿಧಾನಪರಿಷತ್ತಿನ ಸದಸ್ಯರಿರುವ ಜಂಟಿ ಸದನದ ಸಮಿತಿಯ ರಚನೆಗೆ ಸದನ ಒಪ್ಪಿಗೆ ನೀಡುವುದು ಎಂದು ಭಾವಿಸುತ್ತೇನೆ.

+ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ, ಕಾವೇರಿ ನೀರಿನ ವಿಷಯದಲ್ಲಿ ಚರ್ಚೆಯಾಗಿದೆ, ಉತ್ತರ ಆಗಿದೆ. ಧರಣಿ ನಡೆಯುತ್ತಿದೆ. ಸದನದ ಧರಣಿ ಕಲಾಪಗಳಿಗೆ ಆಭರಣವೇನು ಅಲ್ಲ. ನಮ್ಮ ಅನಿಸಿಕೆಗಳನ್ನು ನಾವು ಆಯಾ ಪಕ್ಷಕ್ಕೆ ಸೇರಿದಂತಹ ಮಾನ್ಯ ಮಿತ್ರರು ಆಡಿದ್ದಾರೆ. ಎಲ್ಲರ ಗುರಿ ಒಂದೇ ಆಗಿದೆ. ರಾಜ್ಯದ ರೈತರ ಅಥವಾ ರಾಜ್ಯದ ಹಿತವನ್ನು ರಕ್ಷಣೆ ಮಾಡುವಂತಹ ಮೂಲ ಸದುದ್ದೇಶ ಬಿಟ್ಟರೆ ಮತ್ತೆ ಬೇರೆ ಉದ್ದೇಶ ಇದಕ್ಕೆ ಇರುವುದಕ್ಕೆ ಸಾಧ್ಯವೇ ಇಲ್ಲ, ಎಷ್ಟೇ ವಾಖ್ಯಾನ ಮಾಡಿದರೂ ರಾಜಕೀಯ ಹೆಸರನ್ನು ಹೇಳಿಕೊಂಡು ಬೇಕಾದವರು ಬೇಕಾದಷ್ಟು ಮಾಡಿಕೊಳ್ಳಲಿ, ರಾಜ್ಯದ ಹಿತ ಅತಿ ಮುಖ್ಯ ಎನ್ನತಕ್ಕಂಥದ್ದನ್ನು ಮರೆಯುವುದಕ್ಕೆ ಆಗುವುದಿಲ್ಲ. ಹಿಂದೆಯೂ ಕೂಡ ಇಂತಹ ಘಟನೆಗಳು ನಡೆದಿದೆ, ನಡೆದಿಲ್ಲ ಎನ್ನುವಂತಹ ಮಾತನ್ನು ನಾನು ಹೇಳುವುದಿಲ್ಲ, ಅದಕ್ಕೆ ದಾಖಲೆಗಳು ಇವೆ. ರಾಜ್ಯದ ಹಿತದೃಷ್ಟಿಯಿಂದ ಆ ರೀತಿ ನಡೆದಾಗ ಪ್ರಜಾಪ್ರಭುತ್ವದ ಸಂಪ್ರದಾಯ ಅಥವಾ ಪದ್ಧತಿ, ನಾವು ಇಟ್ಟಿರುವಂತಹ ನಂಬಿಕೆಗೆ ಸಾಕ್ಷಿಯಾಗಿ ಎಷ್ಟೊ ಸಾರಿ ಹಿಂದೆ ಮಾತುಕತೆಗಳ ಮುಖಾಂತರ ಇದನ್ನೆಲ್ಲಾ ಬಗೆಹರಿಸಿಕೊಂಡ ಪ್ರಕರಣಗಳು ಇದೆ. ಆದುದರಿಂದ ಈ ಸಂದರ್ಬದಲ್ಲಿ ಒಂದು ಸಲಹೆ ಮಾನ್ಯ ಸಭಾಧ್ಯಕ್ಷರು ಇದನ್ನು ಒಪ್ಪುವುದಾದರೆ, ಏಕೆಂದರೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಅದು ಅನಿವಾರ್ಯವೆನ್ನುವಂತಹ ದೃಷ್ಟಿಯಿಂದ ಅವರು ಅಭಿಪ್ರಾಯವನ್ನು ಕೊಟ್ಟರೂ ಕೂಡ ಅದಕ್ಕೆ ವಿಭಿನ್ನವಾದಂತಹ ಅಭಿಪ್ರಾಯವನ್ನು ನಾನು ಕೊಡುತ್ತಿದ್ದೇನೆ. ಸರ್ಕಾರ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಅಧ್ಯಕ್ಷತೆಯಲ್ಲಿ ಮಾತುಕತೆ ಮಾಡಿದಂತಹ ಸಂದರ್ಭಗಳು ಇವೆ. ಈ ಸದನದ ಒಳಗಡೆ ಆಗಲಿ, ಹೊರಗಡೆ ಕೂಡ ನಡೆದಿದೆ ಅದಕ್ಕೆ ನಾನು ಇವತ್ತು ಮಾತನಾಡಿದಂತಹ ಸಂದರ್ಭದಲ್ಲಿ ಹೇಳಿದೆ. ನಿನ್ನೆ ಕೂಡ ಹೇಳಿದೆ. ಎಲ್ಲಾ ಕಲಾಪಗಳು ಕೂಡ ಕಾವೇರಿ ಜಲವಿವಾದ ವಿಚಾರದಲ್ಲಿ ಸದನದಲ್ಲಿ ನೋಡುವುದಕ್ಕೆ ಬರುವುದಿಲ್ಲ, ಮಾಡಬಾರದು ಎನ್ನತಕ್ಕಂಥದ್ದು ಎಲ್ಲರ ನಿಲುವು ಕೂಡ ಹೌದು ಅವುಗಳನ್ನು ಖಾಸಗಿಯಾಗಿ ತಮ್ಮಲ್ಲಿ ಮಾತನಾಡುವುದಕ್ಕೆ ಬರುತ್ತದೆ. ಈಗ ರಾಜ್ಯದ ಹಿತವನ್ನು ಕಾಪಾಡಬೇಕೆಂಬ ಉದ್ದೇಶವಿದ್ದರೆ ಮಾತುಕತೆಯ ಮುಖಾಂತರ ಅಭಿಪ್ರಾಯ ಒಕವಾಗಿ ಇರಬೇಕಾದರೆ ಮಾತುಕತೆ ಒಂದು ಅನಿವಾರ್ಯವಾಗಿರುವಂಥ ನಾವು ನಂಬಿಕೊಂಡು ಬಂದಿರುವಂತಹ ಬಂದು ಪದ್ಧತಿಯಾಗಿ ಉಳಿಸಿಕೊಂಡು ಬಂದಿದೆ. ಅದನ್ನು ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದು. ನನ್ನ ಸಲಹೆ ಇಷ್ಟೆ ಅವರು ಬೇರೆ ಕಡೆ ಭಾಷಣಕ್ಕೆ ಹೋಗಿದ್ದಾರೆ ಎಂಬ ಮಾತನ್ನಾಗಲಿ, ಕಾರಣವನ್ನಾಗಲಿ ನಾನು ಕೊಡಲಾರೆ, ನಾನು ಆ ಪಾಯಿಂಟ್ ಹೇಳುತ್ತಾ ಇಲ್ಲ, ಇವತ್ತು ಧರಣಿ ಕುಳಿತಿರುವಂತಹ ಮಿತ್ರರು ಏನಿದ್ದಾರೆ, ನಾವು ಅನುಭವಸ್ಥರು The House is in order, we can take up rest of the business as per the agenda..ಎನ್ನುವಂತಹ ಮಾತನ್ನು ಆಡಿದರೂ ಕೂಡ ನಾನು ವಿಷಯದ ಗಹನತೆಯನ್ನು ಈ ಕಾವೇರಿ ನೀರಿನ ವಿಚಾರದಲ್ಲಿ ಅನುಸರಿಸಿ ನಾನು ಸಲಹೆಯನ್ನು ಕೊಡುತ್ತಿದ್ದೇನೆ. ಸದನವನ್ನು ಸ್ವಲ್ಪ ಮುಂದಕ್ಕೆ ಹಾಕಿ ನಾಳೆ ಬೆಳಿಗ್ಗೆ ಸೇರುವ ಹಾಗೆ ಮಾಡಬಹುದು. ಅಷ್ಟರಲ್ಲಿ ಸರ್ಕಾರ ಮಾತುಕತೆಗೆ